**ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ**

**ಬೆಂಗಳೂರು ದಕ್ಷಿಣ ವಲಯ-4,ಸ.ಹಿ.ಪ್ರಾ.ಶಾಲೆ ಆವರಣ ತ್ರಿವೇಣಿನಗರ , ಕೃಷ್ಣರಾಜಪುರ,**

**ಬೆಂಗಳೂರು-560-036. Tel:25614686**

**ನಮೂನೆ-3**

**(1999ರ ಮಾನ್ಯತೆ ನಿಯಮದಂತೆ)**

ಪ್ರಮಾಣ ಪತ್ರ ಸಂಖ್ಯೆ:ಸಿ51 ರಿಂದ 8 ನೇ ಪ್ರಮಾ /08/2019-20 ದಿನಾಂಕ:12/10/2019

ಸಿಪಿಬಿ ಎಜುಕೇಷನ್ ಟ್ರಸ್ಟ್ (ರಿ) ಶಿವ ಸಧನ, ಕಲ್ಕೆರೆ ಅಗರ ಮುಖ್ಯರಸ್ತೆ, ಶ್ರೀ ಮುನೇಶ್ವರ ದೇವಾಲಯ, ಪಿಳ್ಳಪ್ಪ ಫಾರ್ಮ್ಸ್, ಕಲ್ಕೆರೆ ಹೊರಮಾವು, ಬೆಂಗಳೂರು–560043 ರ ಗೌರ್ನಿಂಗ್ ಕೌನ್ಸಿಲ್‌ನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983, ಕರ್ನಾಟಕ ಎಜುಕೇಷನ್ ಆಕ್ಟ್ 1-1995 ಸೆಕ್ಷನ್ 36 ರಂತೆ ಈ 12/10/2019 ರ ದಿನಾಂಕದಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಗೆ (ಪ್ರಾಥಮಿಕ ಶಾಲೆ) ಮಾನ್ಯತೆಯನ್ನು ನೀಡಿದೆ ಎಂದು ಪ್ರಮಾಣೀಕರಿಸಲಾಗಿದೆ.

| ಕ್ರ.ಸಂ. | | | |
|---|---|---|---|
| 1. | ನೋಂದಣಿ ಸಂಖ್ಯೆ | 16151/2019–20 | |
| 2. | ಶಿಕ್ಷಣ ಸಂಸ್ಥೆಯ ಹೆಸರು ಮತ್ತು ವಿಳಾಸ | ಸಿಪಿಬಿ ಎಜುಕೇಷನ್ ಟ್ರಸ್ಟ್ (ರಿ) ಶಿವ ಸಧನ, ಕಲ್ಕೆರೆ ಅಗರ ಮುಖ್ಯರಸ್ತೆ, ಶ್ರೀ ಮುನೇಶ್ವರ ದೇವಾಲಯ, ಪಿಳ್ಳಪ್ಪ ಫಾರ್ಮ್ಸ್, ಕಲೆರೆ ಹೊರಮಾವು, ಬೆಂಗಳೂರು–560043 | |
| 3. | ಶಾಲೆಯ ಹೆಸರು ಮತ್ತು ವಿಳಾಸ | **ನ್ಯಾಷನಲ್ ಪಬ್ಲಿಕ್ ಸ್ಕೂಲ್ ಕಲ್ಕೆರೆ ನಂ576/2, ಪಿಳ್ಳಪ್ಪ ಫಾರ್ಮ್ಸ್ ಕಲ್ಕೆರೆ ಅಗರ ಮುಖ್ಯರಸ್ತೆ, ಹೊರಮಾವು ಅಂಚೆ, ಬೆಂಗಳೂರು–560113** | |
| 4. | ಈಗಾಗಲೇ ನೀಡಿರುವ ಪ್ರಾವಿಜನಲ್ ಪ್ರಮಾಣ ಪತ್ರದ ನೂಂದಣಿ ಸಂಖ್ಯೆ | 1.ಉಪನಿರ್ದೇಶಕರ ಕಛೇರಿ, ಸಾ.ಶಿ.ಇ ಬೆಂಗಳೂರು ನಗರ ದಕ್ಷಿಣ ಜಿಲ್ಲೆ , ಕಲಾಸಿಪಾಳ್ಯ, ಬೆಂಗಳೂರು–02 ರವರ ನಮೂನೆ–02 ನೋಂದಣಿ ಪ್ರಮಾಣ ಪತ್ರ ಸಂಖ್ಯೆ: 16151/2019–20 ದಿನಾಂಕ 01/07/2019 | |
| 5. | ಮಾನ್ಯತೆ ನೀಡುವ ಬಗ್ಗೆ ಶಿಫಾರೆಸ್ಸು ಮಾಡಿರುವ ಅಧಿಕಾರಿ ಯ ಹೆಸರು ಪದನಾಮ. | **ಶ್ರೀ ಕೆ.ಕಾಂತರಾಜ ಶಿಕ್ಷಣ ಸಂಯೋಜಕರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬೆಂಗಳೂರು ದಕ್ಷಿಣ ವಲಯ–04,** | |
| 6. | ಮಾನ್ಯತೆ ನೀಡಿರುವ ಮಾಧ್ಯಮ | **1 ರಿಂದ 8 ನೇ ತರಗತಿ ಆಂಗ್ಲ ಮಾಧ್ಯಮ** | |
| 7. | ಶಾಲೆ ಅನುದಾನ ಸಹಿತವೇ? ಅನುದಾನ ರಹಿತವೇ? | **ಶಾಶ್ವತ ಅನುದಾನರಹಿತ ಶಾಲೆ** | |
| 8 | ಮಾನ್ಯತೆ ನೀಡಿರುವ ತರಗತಿಗಳು | ತರಗತಿ | ವಿಭಾಗಗಳು |
| | | I | 1 |
| | | II | 1 |
| | | III | 1 |
| | | IV | 1 |
| | | V | 1 |
| | | VI | 1 |
| | | VII | 1 |
| | | VIII | 1 |
| | | | 8(ವಿಭಾಗಗಳು) |
| 9. | ಮಾನ್ಯತೆ ನೀಡಿದ ವರ್ಷ | 2019–20 ನೇ ಸಾಲಿಗೆ 1 ರಿಂದ 8 ನೇ ತರಗತಿಗೆ ತಲಾ ಒಂದು ವಿಭಾಗಕ್ಕೆ ಪ್ರಥಮ ಮಾನ್ಯತೆ ನೀಡಿದೆ | |

***ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನೀಡಲಾಗಿದೆ:***

1) ಶಿಕ್ಷಣ ಕಾಯ್ದೆಯ ಎಲ್ಲಾ ನಿಯಮಗಳನ್ನು ಸರ್ಕಾರದ ಹಾಗೂ ಇಲಾಖೆಯ ಆದೇಶಗಳನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕು.

2) ನೇಮಕಾತಿಗಳನ್ನು ಸರ್ಕಾರಿ ಆದೇಶಗಳ ಪ್ರಕಾರ ಮಾಡುವುದು

.3) ಶಿಕ್ಷಕರುಗಳ ನೇಮಕಾತಿಯನ್ನು ಶಿಕ್ಷಕರ ವಿದ್ಯಾರ್ಥಿಗಳ ಅನುಪಾತ 1:40ರಂತೆ ಮಾಡಬೇಕು.

4) ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠ, ಪೀಠೋಪಕರಣಗಳು, ಸಿಬ್ಬಂದಿ ವರ್ಗ, ಆರ್ಥಿಕ ಅನುಕೂಲತೆಗಳು ನಿಗಧಿ ಪಡಿಸಿರುವ ಪಠ್ಯ ಕ್ರಮದಲ್ಲಿ ಮಾತ್ರ ಬೋಧಿಸಬೇಕು

5)ಅವಧಿ ಮುಗಿದಿರುವ ಸಿರನಿಧಿ ಠೇವಣಿಯನ್ನು ನವೀಕರಿಸಿ ಕೊಳ್ಳಬೇಕು.

೭)ಸಂಬಂಧಿಸಿದ ಪ್ರಾಧಿಕಾರ ಸೂಚಿಸುವ ಯಾವುದೇ ಷರತ್ತನ್ನು ಪಾಲಿಸುವುದು. ಹಾಗೂ ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಇಲಾಖೆಯ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.

೮)ಶಾಲೆಯನ್ನು ಕರ್ತವ್ಯ ನಿರ್ವಹಿಸುತಿರುವ ಬೋಧಕ/ಬೋಧಕೇತರ ಸಿಬ್ಬಂದಿಗೂ ಕರ್ನಾಟಕ ರಾಜ್ಯ ಸರ್ಕಾರವು ಹಾಗೂ ಈ ಬಗ್ಗೆ ಇಲಾಖೆಗೆ ಪ್ರಮಾಣ ಪತ್ರ ಸಲ್ಲಿಸಬೇಕು.

9) ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

10) ಯಾವ ಆಡಳಿತ ಮಂಡಳಿಗೆ ಶಾಲೆಯನ್ನು ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಆಡಳಿತ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ಶಾಲೆ ಯನ್ನು ನಡೆಸತಕ್ಕದ್ದು.

11) ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿ ಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸಿದ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಆಕ್ಟ್ ಸಂಖ್ಯೆ:195) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿ ಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

12) ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ, ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮ 1999 ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

13) ಇಲಾಖೆ ಹಾಗೂ ಸರ್ಕಾರ ನಿಗಧಿ ಪಡಿಸಿದ ಪಠ್ಯ ಪುಸ್ತಕ, ಪರೀಕ್ಷಾ ಕ್ರಮಗಳನ್ನು ತಪ್ಪದೇ ಅಳವಡಿಸತಕ್ಕದ್ದು.

14) ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.

15) ಪ್ರತಿ ವರ್ಷವು ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

16) ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು, ಆಟದ ಮೈದಾನ, ಶಾಲಾಕಟ್ಟಡ ಮುಂತಾದ ಸೌಲಭ್ಯಗಳನ್ನು ಸಮರ್ಪಕವಗಿ ಒದಗಿಸಿಕೊಳ್ಳತಕ್ಕದ್ದು, ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.

17) ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.

18) ಶಾಲೆಯನ್ನು ನೇಮಕ ಮಾಡಿಕೊಳ್ಳುವ ಪ್ರತಿಯೊಬ್ಬ ಬೋಧಕ/ಬೋಧಕೇತರ ಸಿಬ್ಬಂದಿಗೂ ಕರ್ನಾಟಕ ನಾಗರೀಕ ಸೇವಾ ನಿಯಮದ ಪ್ರಕಾರ ಸೇವಾ ಪುಸ್ತಕವನ್ನು ಪ್ರಾರಂಭಿಸತಕ್ಕದ್ದು. ಮತ್ತು ಸೇವಾ ಭದ್ರತೆ ದಗಿಸತಕ್ಕದ್ದು.

19) ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಬೇಕು.

20) ಸರ್ಕಾರದ ಅದಿಸೂಚನೆ ಸಂಖ್ಯೆ 104 ಎಸ್. ಇಪಿ ದಿನಾಂಕ 12/01/2006 ರ ಆದೇಶದನ್ವಯ ರಚಿಸಲಾದ ಕರ್ನಾಟಕ ಎಜುಕೇಷನಲ್ Institutions ( Certain terms and conditions of services employees in private unaided primary and secondary and pre-university educatioinal institutions ) Rules 2005 ಪ್ರಕಾರ ನೌಕರರ ಸೇವಾ ಭದ್ರತೆ ಒದಗಿಸಿ ಸೇವಾ ಪುಸ್ತಕಗಳನ್ನು ನಿರ್ವಹಣೆ ಮಾಡಬೇಕು ವೇತನವನ್ನು ಬ್ಯಾಂಕ್ ಮೂಲಕ ಪಾವತಿ ಮಾಡಬೇಕು.

21)ಆಯುಕ್ತರ ಕಛೇರಿ ಸಾ.ಶಿ.ಇ ನೃಪತುಂಗ ರಸ್ತೆ, ಬೆಂಗಳೂರು-01 ಸುತ್ತೋಲೆ ಸಂಖ್ಯೆ: ಸಿ7(2)ಪ್ರಾ.ಶಿಅ/ಶಾಮ.ಲೈ.ಕಿ40/2014-15 ದಿನಾಂಕ 23/07/2014 ಪ್ರಕಾರ ಅನ್ವಯ ಸೂಚಿಸಿರುವ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

22)ಪರಿಷ್ಕೃತ ನೊಂದಣಿ ಪ್ರಮಾಣ ಪತ್ರ ಷರತ್ತುಗಳು ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮಗಳು ಹಾಗೂ ಕಾಲದಿಂದ ಕಾಲಕ್ಕೆ ಹೊರಡಿಸಲಾಗುವ ಇಲಾಖಾ ನಿಯಮಗಳಿಗೆ ಒಳಪಟ್ಟಿದೆ.

23)ಸರ್ಕಾರದ ಅಧಿಸೂಚನೆ ಇಡಿ274 ಪಿಜಿಸಿ 2017 ದಿನಾಂಕ 21/10/2017 ರನ್ವಯ ಕನ್ನಡ ಭಾಷಾ ಕಲಿಕೆ ನಿಯಮಗಳು 2017 ನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

(ಪ್ಲೀವರ್ ಪಾಷ)
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಬೆಂಗಳೂರು ದಕ್ಷಿಣ ವಲಯ-4

ಗೆ,1.ಕಾರ್ಯದರ್ಶಿಗಳು, ಸಿಪಿಬಿ ಎಜುಕೇಷನ್ ಟ್ರಸ್ಟ್ (ರಿ) ಶಿವ ಸಧನ, ಕಲ್ಕೆರೆ ಅಗರ ಮುಖ್ಯರಸ್ತೆ, ಶ್ರೀ ಮುನೇಶ್ವರ ದೇವಾಲಯ, ಪಿಳ್ಳಪ್ಪ ಫಾರ್ಮ್ಸ್, ಕಲ್ಕೆರೆ ಹೊರಮಾವು, ಬೆಂಗಳೂರು-560043 ಪ್ರತಿ: 1.ಕಛೇರಿ ಪ್ರತಿ